Ref. NO. 52/2022 – Cross of MW-1 on DE.



ದಿನಾಂಕ **23.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- **1** ನೇ ಪಾರ್ಟಿ ಪರವಾಗಿ : **LCH** ವಕೀಲರಿಂದ

ಸುಮಾರು 25 ಇಲಾಖಾ ವಿಚಾರಣೆಗಳನ್ನು ನಾನು ಸಂಸ್ಥೆಯಲ್ಲಿ ಮಾಡಿದ್ದೇನೆ. ಸಿ ಎಸ್ ಡಿ ನಿಯಮಾವಳಿಗಳ ಪ್ರಕಾರ ನಾನು ಇಲಾಖೆ ವಿಚಾರಣೆ ಮಾಡುತ್ತೇನೆ. ಪ್ರಾಥಮಿಕ ವಿಚಾರಣೆ ಪ್ರಾರಂಭವಾಗುವ ಮೊದಲು ಚಾರ್ಜ್ ಶೀಟ್, ರಿಪೋರ್ಟ್ ಮತ್ತು ವಿಚಾರಣೆಯಲ್ಲಿ ನಿಶಾನೆಯಾಗಿ ಗುರುತಿಸಿರುವ ಎಲ್ಲಾ ದಾಖಲಾತಿಗಳನ್ನು ನೀಡಿದ್ದೆ. ದಿಃ11.08.2016 ರಂದು ಪ್ರಾಥಮಿಕ ವಿಚಾರಣೆ ನಿ.ಎಂ.20 ಪ್ರಕಾರ ಮಾಡಿದ್ದೆ. ಪ್ರಾಥಮಿಕ ವಿಚಾರಣೆಯ ಸಮಯದಲ್ಲಿ ಅವರ ಮೇಲಿರುವ ಆರೋಪಗಳನ್ನು ಹೇಳಿದ್ದೇನೆ, ಸಹ ನೌಕರನ ಸಹಾಯ ಪಡೆಯುವ ಬಗ್ಗೆ ಹೇಳಿದ್ದೇನೆ, ಆರೋಪಕ್ಕೆ ಉತ್ತರ ಕೊಟ್ಟಿದ್ದೀರಾ ಎಂದು ಕೇಳಿದ್ದೇನೆ, ಆರೋಪ ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದ್ದೇನೇ, ಆರೋಪದ ದಾಖಲಾತಿಗಳು ತಲುಪಿದೆಯಾ ಮತ್ತು ಬೇಕಾ ಎಂದು ಕೇಳಿದ್ದೇನೆ. ವಿಚಾರಣದ ಕ್ರಮ ನಿಯಮಗಳನ್ನು ನೀವು ಪ್ರಾಥಮಿಕ ವಿಚಾರಣಾ ಸಮಯದಲ್ಲಿ ನೀವು ಹೇಳಿಲ್ಲ ಎಂದರೆ ಸಾಕ್ಷಿ ಮೌಖಿಕವಾಗಿ ಹೇಳಿದ್ದೇನೆ ಎನ್ನುತ್ತಾರೆ. ನೀವು ಆಪಾದಿತನಿಗೆ ಕ್ರಮ ನಿಯಮದ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ನಿಎಂ-21 ಪ್ರೊಸಿಡಿಂಗ್ಸ್ ನ್ನು ನಾನೇ ಆಪಾದಿತನನ್ನು, ಪ್ರೆಸಿಡಿಂಗ್ ಆಫೀಸರ್, ರಿಪೊರ್ಟರ್ ಅವರನ್ನು ವಿಚಾರಿಸಿ ನಾನೇ ನನ್ನ ಸಮ್ಮುಖದಲ್ಲಿ ಟೈಪ್ ಮಾಡಿಸಿದ್ದೇನೆ. ಪುನಃ ಸಾಕ್ಷಿ ರಿಪೋರ್ಟರ್ ಹೇಳಿರುವುದನ್ನು ನಾನು ಹೇಳಿ ಟೈಪ್ ಮಡಿಸಿರುತ್ತೇನೆ ಎನ್ನುತ್ತಾರೆ. ರಿಪೊರ್ಟರ್ ನ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲು ಒಂದೇ ದಿವಸ ನಡೆದಿದೆ ಎಂದರೆ ಸರಿ. ಮುಖ್ಯ ವಿಚಾರಣೆಯನ್ನು ಟೈಪ್ ಮಾಡಿಸಿದ್ದು ಮತ್ತು ಪಾಟೀ ಸವಾಲನ್ನು ಟೈಪ್ ಮಾಡಿಸದೇ ಕೈಯಲ್ಲಿ ಬರೆಯಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ಪಾಟೀ ಸವಾಲನ್ನು ಟೈಪ್ ಮಾಡಿಸಿಲ್ಲ ಕೈಯಲ್ಲಿ ಬರೆದಿದ್ದೇವೆ ಎನ್ನುತ್ತಾರೆ. ಆಪಾದಿತರು ರಿಪೊರ್ಟರಿಗೆ ನನ್ನ ಸಮಕ್ಷಮ ಪ್ರಶ್ನೆಗಳನ್ನು ಕೇಳಿರುತ್ತಾರೆ ಮತ್ತು ನಾನು ಅವರು ಕೊಟ್ಟ ಉತ್ತರವನ್ನು ಕೇಸ್ ವರ್ಕರ್ ಕೈಯಲ್ಲಿ ರೆಕಾರ್ಡ್

ಮಾಡಿಸಿದ್ದೇನೆ. ಇಂತಹ ಕೇಸ್ ವರ್ಕರ್ ಕೈಬರಹದಲ್ಲಿ ಬರೆದಿದ್ದಾರೆ ಮತ್ತು ನಾನು ಹೇಳಿದ ಪ್ರಕಾರ ಬರೆದಿದ್ದಾರೆ ಎಂದು ಷರಾ ಬರೆದಿದ್ದಾರಾ ಎಂದರೆ ಸಾಕ್ಷಿ ಬರೆದಿಲ್ಲ ಎನ್ನುತ್ತಾರೆ. ಪುನಃ ಆಪಾದಿತರು ಅದನ್ನು ಓದಿ ಸಹಿ ಮಾಡಿರುತ್ತಾರೆ. ರಿಪೋರ್ಟರ್ ಮುಖ್ಯ ವಿಚಾರಣೆಯ ಭಾಗವನ್ನು ವಿಚಾರಣೆಯ ದಿನಾಂಕದಂದು ನನ್ನ ಸಮ್ಮುಖದಲ್ಲಿ ರೆಕಾರ್ಡ್ ಮಾಡಿಲ್ಲ ಮತ್ತು ಅದನ್ನು ಮುಂಚಿತವಾಗಿ ಸಿದ್ಧಪಡಿಸಿ ತಂದಿರುತ್ತಾರೆ ಎಂದರೆ ಸರಿಯಲ್ಲ.

ಮಂಡನಾಧಿಕಾರಿ ದಾಖಲಾತಿಗಳನ್ನು ಹಾಜರು ಪಡಿಸಿದ್ದಾರೆ ಮತ್ತು ವಿಚಾರಣೆಯ ಸಮಯದಲ್ಲಿ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂದು ಗಮನಿಸುತ್ತಾರೆ. ಮಂಡನಾಧಿಕಾರಿ Observer ಆಗಿದ್ದರ ಎಂದರೆ ಸರಿಯಲ್ಲ. ಮಂಡನಾಧಿಕಾರಿ ವಿಚಾರಣೆಯಲ್ಲಿ ಮೇಲೆ ಹೇಳಿದ ಪಾತ್ರವನ್ನು ಮಾಡಿದ್ದಾರೆ ಎಂದರೆ ಸರಿ.

ಆಪಾದಿತರು ವಿಚಾರಣಾ ಸಮಯದಲ್ಲಿ ಪ್ರಯಾಣಿಕರ ಹೇಳಿಕೆಯ ದಾಖಲಾತಿಯ ಬಗ್ಗೆ ತಕರಾರು ಎತ್ತಿದ್ದಾರೆ ಎಂದರೆ ಸರಿ. ನಿಎಂ-4 ಮತ್ತು 5 ದಾಖಲಾತಿಗಳ ಬಗ್ಗೆ ಆಪಾದಿತರು ವಿಚಾರಣಾ ಸಮಯದಲ್ಲಿ ತಕರಾರು ಎತ್ತಿದ್ದಾರೆ ಎಂದರೆ ಸರಿ. ನಿಎಂ-4 ರಲ್ಲಿರುವ ಪ್ರಯಾಣಿಕರ ಸಹಿ ಮತ್ತು ನಿಎಂ-5 ರಲ್ಲಿರುವ ಪ್ರಯಾಣಿಕರ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಒಂದೇ ರೀತಿ ಇದೆ ಮತ್ತು ಸೈಜಿನಲ್ಲಿ ವ್ಯತ್ಯಾಸ ಇದೆ ಎನ್ನುತ್ತಾರೆ. ನಿಎಂ-23 ರ ಪ್ರಕಾರ 1 ನೇ ಪಾರ್ಟಿ ಸಂರಕ್ಷಣಾ ಹೇಳಿಕೆ ಸಲ್ಲಿಸಿದ್ದಾರೆ ಎಂದರೆ ಸರಿ. ನಿಎಂ-23 ರ ಜೊತೆ 1 ನೇ ಪಾರ್ಟಿ ಪ್ರಯಾಣಿಕರ ಹೇಳಿಕೆ ಜೆರಾಕ್ಸ್ ಪ್ರತಿಯನ್ನು ಹಾಜರು ಮಾಡಿದ್ದಾರೆ ಎಂದರೆ ಸರಿ. ದಂಡ ರಸೀದಿ ಮತ್ತು ಪ್ರಯಾಣಿಕರ ಹೇಳಿಕೆಯನ್ನು ಪರಿಗಣಿಸಿ ನನ್ನ ನಿರ್ಣಯ ವರದಿಯನ್ನು ಸಲ್ಲಿಸಿರುತ್ತೇನೆ. ದಂಡ ರಸೀದಿ ಮತ್ತು ಪ್ರಯಾಣಿಕರ ಹೇಳಿಕೆಯ ಬಗ್ಗೆ 1 ನೇ ಪಾರ್ಟಿ ಸಲ್ಲಿಸಿದ ತಕರಾರಿನ ಬಗ್ಗೆ ನಿಮ್ಮ ವಿಚಾರಣಾ ನಿರ್ಣಯದಲ್ಲಿ ಏನು ಕಾರಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ತಕರಾರ ಆಧಾರ ರಹಿತವಾಗಿದೆ ಎಂದು ಮತ್ತು ಒಬ್ಬ ಪ್ರಯಾಣಿಕ ಟಿಕಿಟ್ ತೆಗೆದುಕೊಳ್ಳದೆ ಪ್ರಯಾಣಿಸುತ್ತಿದ್ದ ಎಂದು ಹೇಳಿದ್ದೇನೆ.

Ref. NO. 52/2022 – Cross of MW-1 on DE.



ನಿಎಂ-4 ಮತ್ತು 5 ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ಟಿಕೆಟ್ ಕಳೆದುಕೊಂಡವರ ಅಥವಾ ಟಿಕೆಟ್ ಇಲ್ಲದವರಾ ಎಂದರೆ ಸಾಕ್ಷಿ ಟಿಕೆಟ್ ರಹಿತ ಪ್ರಯಾಣಿಕರು ಎಂದು ಹೇಳುತ್ತಾರೆ. ದಿಃ 31.05.2016 ರಂದು 1 ನೇ ಪಾರ್ಟಿ ಎಲ್ಲಾ ಪ್ರಯಾಣಿಕರಿಗೆ ಎಲ್ಲಾ ಪ್ರಯಾಣಿಕಾರಿಗೆ ಟಿಕೆಟನ್ನು ವಿತರಿಸಿದ್ದರು ಎಂದರೆ ಸಾಕ್ಷಿ ವರದಿಗಾರು ಚೆಕ್ ಮಾಡಿ ವರದಿ ಸಲ್ಲಿಸಿದ ಪ್ರಕಾರ ಇಲ್ಲ ಎಂದು ಹೇಳುತ್ತಾರೆ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ವರದಿಯಲ್ಲಿ ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ಪರಿಶೀಲಿಸದೇ ಆಡಳಿತ ವರ್ಗದವರಿಗೆ ಅನುಕೂಲವಾಗುವಂತೆ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನೀವು ನಡೆಸಿದ ವಿಚಾರಣೆ ಪ್ರಕ್ರಿಯೆಗಳು ಪ್ರಾಕೃತಿಕ ತತ್ವಗಳಿಗೆ ವಿರೋಧವಾಗಿದೆ ಎಂದರೆ ಸರಿಯಲ್ಲ. ಆಪಾದಿತರ ವಿರುದ್ಧ ಯಾವುದೇ ಆಪಾದನೆಗಳು ಸಾಭೀತಾಗಾದೇ ಇದ್ದರು ಸಾಭೀತಾಗಿದೆ ಎಂದು ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು).

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ. ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು .